ದಿನಾಂಕ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ವಾದಿಗಳ ಪರ ಶ್ರೀ ಎಸ್ ಎಲ್ ಎಸ್ ವಕೀಲರಿಂದ .

ನಾರಾಯಣಸಿಂಗ್ ಠಾಕೂರ್ ರವರು ನನ್ನ ತಂದೆ, ಅವರು ಮೂಲತಃ ಧಾರವಾಡದವರು ಎಂದರೆ ಸರಿಯಲ್ಲ, ಬಿ ಕೆ ಹಳ್ಳಿಯವರು ಎನ್ನುತ್ತಾರೆ. ಅವರು ಧಾರವಾಡದಿಂದ ಬಂದು ಬಿ ಕೆ ಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಾರಾಯಣಸಿಂಗ್ ಠಾಕಾರ್ ರವರು ದೇವಿಸಿಂಗ್ ರವರ ಸಂಬಂಧಿಕರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಕುಟುಂಬಕ್ಕೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ, ಮೊದಲಿನಿಂದಲೂ ಇತ್ತು ಎನ್ನುತ್ತಾರೆ. ನಾನು ಹುಟ್ಟವ ಮೊದಲಿನಿಂದಲೂ ನನ್ನ ತಂದೆಯ ಬಳಿ ಜಮೀನು ಇತ್ತು ಎನ್ನುತ್ತಾರೆ. ನಿಮ್ಮ ತಂದೆ ಗಣ್ಯವ್ಯಕ್ತಿ ಇದ್ದು, ರಾಜಕೀಯದಲ್ಲಿದ್ದರು ಎಂದರೆ ಸರಿ. ದಾವಾ ಆಸ್ತಿಗಳು ಮೂಲತಃ ಸರ್ವೆ ನಂಬರ 44/2 ಅ ಮತ್ತು ಕ ರಲ್ಲಿ ಒಟ್ಟು 17 ಎಕರೆ 27 ಗುಂಟೆ ಇತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ವಾದಿಯವರು ನಮ್ಮ ತಂದೆಗೆ ಮೋಸ ಮಾಡಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ಮೂಲತಃ ರಜಪೂತ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಂದೆಗೆ ನಾನು ಹುಟ್ಟುವ ಮೊದಲು ಮಂಜೂರಾಗಿದ್ದವು. ದಾವಾ ಆಸ್ತಿಗಳು ನಿಮ್ಮ ತಂದೆಗೆ ಮಂಜೂರಾಗಿದ್ದರು ಸಹ ವಾದಿಯರು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ, ನಮ್ಮ ತಂದೆ ಉಳುಮೆ ಮಾಡುತ್ತಿದ್ದರು ಎನ್ನುತ್ತಾರೆ. ನಿಮ್ಮ ತಂದೆ ಗಣ್ಯವ್ಯಕ್ತಿ ಇದ್ದು, ರಾಜಕೀಯದಲ್ಲಿದ್ದರಿಂದ 1977 ರಲ್ಲಿ ವಾದಿಯರಿಗೆ ಮೋಸ ಮಾಡಿ ಭೂ ನ್ಯಾಯಮಂಡಳಿಗೆ ಪಾರಂ ನಂಬರ 9 ಅನ್ನು ಸಲ್ಲಿಸಿದ್ದರು ಎಂದರೆ

ಸರಿಯಲ್ಲ. ಮೊದಲಿನಿಂದಲೂ ನಮ್ಮ ತಂದೆ ಉಳುಮೆ ಮಾಡುತ್ತಿದ್ದರು ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ದಾಖಲೆಗಳು ನಿಮ್ಮ ಹೆಸರು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1980 ರಿಂದ ವಾದಿಯರೇ ಕಬ್ಜೆಯಲ್ಲಿದ್ದು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ನಾವೇ ಉಳುಮೆ ಮಾಡುತ್ತಿದ್ದೇವೆ ಎನ್ನುತ್ತಾರೆ. ಅಸಲು ದಾವೆ ಸಂಖ್ಯೆ 41/2017 ರಲ್ಲಿ ವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಪ್ರತ್ಯಕ್ಷ ಕಬ್ಜೆಯಲ್ಲಿ ವಾದಿಯರೇ ಇದ್ದರೂ ಸಹ ನಿಮ್ಮ ಕಬ್ಜೆಯಲ್ಲಿ ಇದೆ ಎಂದು ಸುಳ್ಳು ವಾದ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಪ್ರತಿವಾದಿ 1 ರಿಂದ 3 ರವರ ಶ್ರೀ ಎಲ್ ಎಸ್ ಎ ವಕೀಲರಿಂದ.

ದಾವಾ ಜಮೀನಿಗೆ ನೀವು ಸಂಬಂಧವಿಲ್ಲ ಪ್ರತಿವಾದಿ 1 ರಿಂದ 3 ರವರು ಮಾತ್ರ ಮಾಲೀಕರು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.